## ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತ್ವರಿತ ವಿಶೇಷ ನ್ಯಾಯಾಲಯ-I, ಚಾಮರಾಜನಗರ

## S.C No.11/2025

ಚಾಸಾ:03/ಪ್ರಾಸಾ:02

ದಿನಾಂಕ **03.08.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಆರೋಪಿಯನ್ನು ವಿ.ಸಿ.ಯ ಮೂಲಕ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿತ್ತು, ಅವರಿಗೆ ಧ್ವನಿ ಕೇಳಿಸಲಾಗುತ್ತಿದೆಯಾ ಎಂದು ಪರಿಶೀಲಿಸಿದ ನಂತರ ಅವರ ಹಾಜರಾತಿಯಲ್ಲಿ ಸಾಕ್ಷಿಯ ವಿಚಾರಣೆಯನ್ನು ಮಾಡಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ಚೆನ್ನಂಜೇಗೌಡ |
| **ತಂದೆ** / ಗಂಡನ ಹೆಸರು | : | ಲೇಟ್ ಕುನ್ನೇಗೌಡ |
| ವಯಸ್ಸು | : | 57ವರ್ಷ |
| ವೃತ್ತಿ | : | ಕೂಲಿಕೆಲಸ |
| ವಿಳಾಸ | : | ಶಿವಪುರ |

**ಮುಖ್ಯ ವಿಚಾರಣೆ – ಮಾನ್ಯ ಸರ್ಕಾರಿ ಅಭಿಯೋಜಕರಿಂದ**

ನನಗೆ ಚಾಸಾಃ1 ಮತ್ತು 2ರವರ ಪರಿಚಯವಿದೆ. ಅವರ ಜಮೀನು ನಮ್ಮ ಜಮೀನಿನ ಸಮೀಪವಿದೆ. ಅಂದಾಜು 2 ವರ್ಷಗಳ ಹಿಂದೆ ಚಾಸಾಃ1ರವರು ಜಮೀನಿನಲ್ಲಿದ್ದಾಗ ಒಬ್ಬ ಆಸಾಮಿ ಬಂದು ಅವರ ಕೊರಳಲ್ಲಿರುವ ತಾಳಿಗೆ ಕೈ ಹಾಕಿದಾಗ ಚಾಸಾಃ1 ಪ್ರತಿಭಟನೆ ಮಾಡಿದಾಗ ಚಾಕುವಿನಿಂದ ಚಾಸಾಃ1ರವರ ಎಡಗೈಗೆ ಗಾಯಮಾಡಿದನು. ಈ ಬಗ್ಗೆ ವಿಚಾರಣೆ ನಡೆಸುವ ಸಲುವಾಗಿ ಪೊಲೀಸರು ಚಾಸಾಃ1ರವರ ಜಮೀನಿಗೆ ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ಬಂದಿದ್ದರು. ಆ ಸಮಯದಲ್ಲಿ ನಾನು

ಚಾಸಾಃ1 ಹಾಗೂ ಪೊಲೀಸರು ನಮ್ಮ ಊರಿನ ಶ್ರೀ ಕನಕರಾಜು ಇದ್ದೆವು. ಪೊಲೀಸರು ಚಾಸಾಃ1ರವರ ಜಮೀನಿನಲ್ಲಿ ಮಹಜರ್ ಮಾಡಿದರು. ಪೊಲೀಸರು ಸ್ಥಳದಲ್ಲಿದ್ದ ಒಂದು ಹೆಲ್ಮೇಟ್ ಅನ್ನು ವಶಪಡಿಸಿಕೊಂಡರು. ಪಿಎಫ್ ನಂ. 86/2024 ರಲ್ಲಿ ವದಿಯಾಗಿರುವ ಕಪ್ಪು ಮತ್ತು ಕೆಂಪು ಬಣ್ಣದ ಹೆಲ್ಮೇಟ್ ಅನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಸದರಿ ಸ್ವತ್ತನ್ನು ಮುಮಾ. 1 ಎಂದು ಗುರುತಿಸಲಾಯಿತು. ಸಾಕ್ಷಿ ಸ್ಥಳ ಅಮಾನತ್ತು ಮಹಜರ್ ದಿಃ 24.08.2024 ರಲ್ಲಿ ತಾವು ಹೆಬ್ಬೆಟ್ಟು ಗುರುತು ಹಾಕಿರುವುದಾಗಿ ನುಡಿಯುತ್ತಾರೆ, ಸದರಿ ಮಹಜರ್ ಅನ್ನು ನಿಪಿಃ 1 ಎಂದು ಗುರುತಿಸಲಾಯಿತು. ನಿಪಿಃ1 ರೊಂದಿಗೆ ಹಾಜರುಪಡಿಸಿರುವ ಛಾಯಾಚಿತ್ರದಲ್ಲಿ ಸಾಕ್ಷಿ ತಮ್ಮನ್ನು ಚಾಸಾಃ1, 4 ಮತ್ತು ಪೊಲೀಸ್ ಅಧಿಕಾರಿಯನ್ನು ಗುರುತಿಸಿರುತ್ತಾರೆ, ಸದರಿ ಪೋಟೋವನ್ನು ನಿಪಿಃ 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿಯ ಪರವಾಗಿಃ ಶ್ರೀ ಪಿಕೆಬಿ ವಕೀಲರಿಂದ**

2. ಚಾಸಾಃ1, 2 ನಮ್ಮ ಊರಿನವರೇ ಅವರ ಪರಿಚಯವಿದೆ, ಅವರೊಂದಿಗೆ ವಿಶ್ವಾಸವಾಗಿರುತ್ತೇನೆ. ಚಾಸಾಃ4, 5, 6 ನಮ್ಮ ಊರಿನವರು ಹಾಗೂ ನನ್ನ ಪರಿಚಿತರಾಗಿರುತ್ತಾರೆ. ಮಹಜರ್ ಬರೆಯಲು ಪೊಲೀಸರು ಸ್ಥಳಕ್ಕೆ ಬಂದಾಗ ಮುಮಾ. 1 ಹೆಲ್ಮೇಟ್ ಅನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಿರುತ್ತಾರೆ. ನಾನು ಮೂಡ್ಲಪುರದ ಮಾಸ್ಟರ್ ರವರ ಜಮೀನಿನಲ್ಲಿ ಕೂಲಿ ಕೆಲಸ ಮಾಡುತ್ತಿದ್ದೆ. ಪಕ್ಕದಲ್ಲೇ ಶಶಿಕಲಾರವರ ಜಮೀನಿದೆ. ಆ ದಿನ ನಾನು ಬೆಳಿಗ್ಗೆ 8.00 ರಿಂದ ಸಂಜೆ 5.00 ಗಂಟೆಯವರಗೆ ಕೂಲಿ ಕೆಲಸ ಮಾಡಿರುತ್ತೇನೆ. ಪೊಲೀಸರು ನನಗೆ ಮಹಜರ್ ಕಾಲಕ್ಕೆ ಹಾಜರಿರಬೇಕೆಂದು ನೋಟೀಸ್ ಜಾರಿ ಮಾಡಲಿಲ್ಲ. ಗಲಾಟೆ ನಡೆಯುತ್ತಿದ್ದ ಕಾರಣ ನಾನೇ

ಚಾಸಾಃ 1ರವರ ಜಮೀನಿಗೆ ಹೋದೆ. ನಾನು ಶಶಿಕಲಾರವರ ಜಮೀನಿಗೆ ಹೋಗಿದ್ದೆ ಅವರ ಕೈಗೆ ಗಾಯವಾಗಿತ್ತು ನಾನು ಪುನಃ ಕೂಲಿಗೆ ಹೋಗಲಿಲ್ಲ. ಪೊಲೀಸರು ಸ್ಥಳದಲ್ಲಿ ಶಶಿಕಲಾ ಹೇಳಿದ ಸಂಗತಿಗಳನ್ನು ಬೆರದುಕೊಂಡರು. ನನಗೆ ಓದಲು ಬರುವುದಿಲ್ಲ ಹೆಬ್ಬೆಟ್ಟು ಗುರುತು ಮಾಡಿರುತ್ತೇನೆ. ಪೊಲೀಸರು ಮಹಜರ್ ಅನ್ನು ಓದಿ ಹೇಳಿರುತ್ತಾರೆ. ಅದೆಲ್ಲ ನನಗೆ ನೆನಪಿಲ್ಲ. ಪೊಲೀಸರು ಸ್ಥಳಕ್ಕೆ ಬಂದಾಗ ಮಧ್ಯಾಹ್ನ 3.00 ಗಂಟೆಯಾಗಿತ್ತು, 4.00 ಗಂಟೆಗೆ ಮರಳಿ ಹೋದರು. ಮಹಜರ್ ಸ್ಥಳದಲ್ಲೇ ಪೊಲೀಸರು ಮಹಜರ್ ಗೆ ರುಜು ತೆಗೆದುಕೊಂಡರು. ಪೊಲೀಸರು ನನ್ನ ಕಣ್ಣೆದುರು 3 ಜನಗಳ ರುಜುಗಳನ್ನು ಮಹಜರ್ ಗೆ ಪಡೆದುಕೊಂಡಿರುತ್ತಾರೆ. ಯಾರು ಮೊದಲು ರುಜು ಮಾಡಿದರು ಎಂದು ಗೊತ್ತಿಲ್ಲ. ಚಾಸಾಃ1 ಮತ್ತು 2ರವರೊಡನೆ ವಿಶ್ವಾಸದಿಂದ ಇರುವ ಕಾರಣ ಪೊಲೀಸ್ ಠಾಣೆಗೆ ಹೋಗಿ ನಿಪಿಃ1 ದಾಖಲೆಗೆ ರುಜು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸ್ ಠಾಣೆಗೆ ಹೋಗಿದ್ದೇನೆ. ಪೊಲೀಸ್ ಠಾಣೆಯಲ್ಲಿ ಪೊಲೀಸರು ನನ್ನ ಹೆಬ್ಬೆಟ್ಟು ಗುರುತು ಪಡೆದುಕೊಂಡಿರುತ್ತಾರೆ. ಯಾವ ದಾಖಲೆಗೆ ನನ್ನ ಹೆಬ್ಬೆಟ್ಟು ಗುರುತು ಪಡೆದುಕೊಂಡರು ಎಂದು ನನಗೆ ಗೊತ್ತಿಲ್ಲ. ಪೊಲೀಸರು ಶಶಿಕಲಾರವರ ಜಮೀನಿಗೆ ಬಂದು ಮಹಜರ್ ಮಾಡಿ ಮುಮಾ. 1 ಅನ್ನು ಅಮಾನತ್ತುಪಡಿಸಿಕೊಳ್ಳದೇ ಇದ್ದರೂ ಸಹ ಚಾಸಾಃ1 ಮತ್ತು 2ರವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಮಹಜರ್

ಕಾಲದಲ್ಲಿ ಪೊಲೀಸರು ನಿಪಿಃ 2 ರಂತೆ ಪೋಟೋ ತೆಗೆದಿರುವುದಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಲಾಗಿ ಕೇಳಿ ಸರಿಯಿದೆ ಎಂದು ಒಪ್ಪಿರುತ್ತಾರೆ.

**(ಎಸ್.ಜಿ. ಕೃಷ್ಣ)**
ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ತ್ವರಿತ ವಿಶೇಷ ನ್ಯಾಯಾಲಯ–I, ಚಾಮರಾಜನಗರ.